
# ನೆನಪಿಗಾಗಿ




ರಾಧೆ...
ನನ್ನ ನೆನಪಿಗಾಗಿ
ನವಿಲು ಗರಿಯನೊಂದನಿಟ್ಟುಕೊ
ನಿನಗೆ ಬೇಸರವಾದಾಗ
ನಿನ್ನ ಮಡಿಲಾಗಿ
ಮನದ ಮಿದುವಾಗಿ
ನಿನಗೆ ಚೈತನ್ಯ ತಂದೇನು

ರಾಧೆ...
ನನ್ನ ನೆನಪಿಗಾಗಿ
ಕೊಳಲನೊಂದಿಟ್ಟುಕೊ
ನಿನಗೆ ನೋವಾದಾಗ
ನಿನ್ನ ಇನಿಯನಾಗಿ
ಅವನ ಒಡಲಾಗಿ
ನಿನಗೆ ನಲಿವು ತಂದೇನು

ರಾಧೆ...
ನನ್ನ ನೆನಪಿಗಾಗಿ
ಮುಡಿಗೆ ಹೂವೊಂದ ಇಟ್ಟುಕೊ
ನಿನಗೆ ಹಿತವಲ್ಲದ ಸಮಯದಿ
ನಿನ್ನ ಗೆಳಯನಾಗಿ
ನಿನಗೆ ಆತ್ಮಸಖನಾದೆನು
ತರತರದಿ ತರುವೆ ಸುಖವನು.

● ಸುಮಿತ್ ಮೇತ್ರಿ ಹಲಸಂಗಿ